# ತೆರೆದಷ್ಟೂ ಜಗತ್ತು

## ತಿರುಮಲೇಶ್ ಅಕ್ಷಯ ಕಾವ್ಯದ ಅರಬ್ಬೀಯಲ್ಲೊಂದು ಕಿರು ವಿಹಾರ



ಕಮಲಾಕರ ಕಡವೆ

ಪ್ರತಿ ಕವಿಯೂ ಒಂದು ಚಲನಶೀಲ ನುಡಿಶೋಧನೆಯ ಪದಮೋಹಿ. ಹುಡುಕಿ ಹೆಕ್ಕಿ ಜತನದಿಂದ ತನ್ನ ಸಾಲಿನಲ್ಲಿ ಪದವನಿಡುವ ಕವಿ ಆ ಪದವೊಂದರ ಮೂಲಕವೇ ಎಷ್ಟೋ ಜಗತ್ತುಗಳನ್ನು ಮೂರ್ತಗೊಳಿಸುವ, ಅನುಭವವೇದ್ಯಗೊಳಿಸುವ ಪ್ರಯತ್ನದಲ್ಲಿರುತ್ತಾನೆ. ಕೆ.ವಿ. ತಿರುಮಲೇಶ್ ಅವರ ಕಾವ್ಯದ ಅವಲೋಕನಕ್ಕೆ ತೊಡಗಿದಾಗಲೂ ಅವರು ಏನು 'ಹೇಳು'ತ್ತಿದ್ದಾರೆ ಎನ್ನುವುದಕ್ಕಿಂತ ಅವರು ಪದಗಳೊಂದಿಗೆ, ಭಾಷೆಯೊಂದಿಗೆ, ಶೈಲಿಯೊಂದಿಗೆ ಏನು 'ಮಾಡು'ತ್ತಿದ್ದಾರೆ ಎನ್ನುವುದು ನಮ್ಮನ್ನು ಹೆಚ್ಚು ಆಕರ್ಷಿಸುತ್ತದೆ, ಆವರಿಸುತ್ತದೆ.

ಒಂದು ಸಾಧಾರಣ ಸ್ಥಿತಿಯನ್ನು ಸೂಕ್ಷ್ಮ ವಿವರಗಳೊಂದಿಗೆ ವರ್ಣಿಸುತ್ತ ಸ್ಥಿತಿವಿಶೇಷವನ್ನಾಗಿಸುವುದು, ತನ್ಮೂಲಕ ಒಂದು ದರ್ಶನಸಾಧ್ಯತೆಯನ್ನು ಓದುಗರಿಗೆ ತೆರೆಯುವುದು ತಿರುಮಲೇಶ್ ಅವರ ಮೊದಲ ಸಂಕಲನಗಳಲ್ಲಿರುವ ಕವಿತೆಗಳ ಕ್ರಮ. 'ವ್ಯಾನ್‌ಗಾನ್ ಬೂಟುಗಳು', 'ಅವರು', 'ನೂರು ಮಂದಿ ಮನುಷ್ಯರು' ಇತ್ಯಾದಿ ಅದೆಷ್ಟೋ ಕವಿತೆಗಳಲ್ಲಿ ಓದುಗರನ್ನು ತಿರುವುಮುರುವಿನ ದಾರಿಯಲ್ಲಿ ನಿರ್ದೇಶಿಸಿ, ಕೊನೆಯ ಸಾಲಿನಲ್ಲಿ ಧಿಗ್ಗನೆ ದಿಕ್ಕು ಬದಲಿಸಿದಂತೆ ಹೊಸ ನೋಟಕ್ಕೆ ಒಳಗಾಗಿಸುವ ಈ ಕವಿತೆಗಳು ಬಹಳ ಪರಿಣಾಮಕಾರಿ.

ಆವನ ಅನೇಕ ಹೆಂಡಂದಿರಿದ್ದರಲ್ಲ
ಅವರೇನಾದರು?
ಅವರೆ? ಕೆಲವರು ಅವರವರ ಹುಟ್ಟೂರಿಗೆ
ಹೊರಟುಹೋದರು. ಇನ್ನು ಕೆಲವರು
ಯಾರನ್ನೋ
ಆಶ್ರಯಿಸಿದರು. ಕೆಲವರು ಚಾರ್‌ಮಿನಾರಿನ
ಸಮೀಪ ಮಾಲೆಗಳನ್ನು ಕಟ್ಟಿ ಮಾರತೊಡಗಿದರು.
ಹಳೆ ನಗರದ ಧೂಳು ಎಲ್ಲಾ ಹೂವುಗಳ ಮೇಲೂ
ಕುಳಿತಿದೆ.

ಕೆಲವರು ನರ್ತಕಿಯರಾದರು. ಸ್ಪರ್ಶಕ್ಕೆ
ನಾಚಿದರು.

ನಿಜಕ್ಕೂ ಪ್ರೇಮಿಸಿದರು, ಬೇರೆ ರೀತಿಯಿಂದ
ಬೇರೆ ಜನರೆದುರು ಹಾಡಿದರು ಆಗಿಂದಾಗ್ಗೆ ಸತ್ತ
ಇವರ ಗೋರಿಯನ್ನು ಯಾರೂ ಕಟ್ಟಿಸಲಿಲ್ಲ.